ಸತ್ಯಮೇವ ಜಯತೇ

# ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

**ನಂ.16, 2ನೇ ಮತ್ತು 3ನೇ ಮಹಡಿ, ಬಳ್ಳಾರಿ ರಸ್ತೆ, ಸದಾಶಿವನಗರ, ಬೆಂಗಳೂರು-560080.**
**080-22205189/93, ಇ-ಮೇಲ್: sec.karnataka@ka.gov.in**

No. SECK/ULB/GELN(GBA)/1/2025-ULB E-247649 ದಿನಾಂಕ: 22-01-2026

**"ಚುನಾವಣಾ ಜರೂರು"**

## -: ಪರಿಷ್ಕೃತ ಸುತ್ತೋಲೆ :-

ವಿಷಯ: ಗ್ರೇಟರ್ ಬೆಂಗಳೂರು ಪ್ರಾಧಿಕಾರದ 05 ನಗರ ಪಾಲಿಕೆಗಳ ಸಾರ್ವತ್ರಿಕ ಚುನಾವಣೆಗೆ ವಾರ್ಡ್‌ವಾರು ಮತದಾರರ ಪಟ್ಟಿ ತಯಾರಿಸುವ ಬಗ್ಗೆ ಸೂಚನೆಗಳು.

ಉಲ್ಲೇಖ:
1. ಆಯೋಗದ ಸುತ್ತೋಲೆ ಸಂಖ್ಯೆ: SECK/ULB/GELN(GBA)/ 1/2025-ULB, ದಿನಾಂಕ: 27-10-2025 ಮತ್ತು ಪರಿಷ್ಕೃತ ಸುತ್ತೋಲೆ, ದಿನಾಂಕ: 24-11-2025.
2. ಗ್ರೇಟರ್ ಬೆಂಗಳೂರು ಆಡಳಿತ (ಮತದಾರರ ನೋಂದಣಿ) ನಿಯಮಗಳು, 2025.
3. ಆಯೋಗದ ಕಾರ್ಯಾದೇಶ ಸಂಖ್ಯೆ: SECK/ULB/GELN(GBA) /1/2025-ULB, ದಿನಾಂಕ: 28-10-2025.

-*-*-

ರಾಜ್ಯ ಚುನಾವಣಾ ಆಯೋಗವು ಭಾರತ ಸಂವಿಧಾನದ ಪರಿಚ್ಛೇದ 243-ZA ಮತ್ತು "ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024ರ ಪ್ರಕರಣ 35" ರಂತೆ ಹಾಗೂ "ಗ್ರೇಟರ್ ಬೆಂಗಳೂರು ಆಡಳಿತ (ಚುನಾವಣೆ) ನಿಯಮಗಳು, 2025ರ ನಿಯಮ 03 ಮತ್ತು 04" ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದಡಿ ಬರುವ 0 5 ನಗರ ಪಾಲಿಕೆಗಳಿಗೆ "ಗ್ರೇಟರ್ ಬೆಂಗಳೂರು ಆಡಳಿತ (ಮತದಾರರ ನೋಂದಣಿ) ನಿಯಮಗಳು, 2025ರ ನಿಯಮ 03" ರಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ವಿಧಾನಸಭಾ ಮತದಾರರ ಪಟ್ಟಿಯನ್ನು ಅಳವಡಿಸಿಕೊಂಡು ವಾರ್ಡುವಾರು ಮತದಾರರ ಪಟ್ಟಿಯನ್ನು ತಯಾರಿಸುವ ಸಲುವಾಗಿ ಉಲ್ಲೇಖ (1) ರಂತೆ ಸೂಚನೆಯನ್ನು ನೀಡಲಾಗಿರುತ್ತದೆ. ಅದರಂತೆ, ಮತದಾರರ ನೋಂದಣಿ ಅಧಿಕಾರಿಗಳು ದಿನಾಂಕ: 01-10-2025ರ ಅರ್ಹತಾ ದಿನಾಂಕದಂತೆ ಚಾಲ್ತಿಯಲ್ಲಿರುವ ವಿಧಾನಸಭಾ ಮತದಾರರ ಪಟ್ಟಿಯನ್ನು ಅಳವಡಿಸಿಕೊಂಡು ದಿನಾಂಕ: 19-01-2026 ರಂದು ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಿರುತ್ತಾರೆ.

"ಗ್ರೇಟರ್ ಬೆಂಗಳೂರು ಆಡಳಿತ (ಮತದಾರರ ನೋಂದಣಿ) ನಿಯಮಗಳು, 2025" ರನ್ವಯ, ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೆ ನಮೂನೆ-4, ಹೆಸರು ಸೇರ್ಪಡೆಗೆ ಆಕ್ಷೇಪಣೆ ನಮೂನೆ-5, ಹೆಸರು ತಿದ್ದುಪಡಿಗೆ ನಮೂನೆ-6, ಸ್ಥಳ ಬದಲಾವಣೆಗೆ ನಮೂನೆ- 7 ಮತ್ತು ಹೆಸರು ತೆಗೆದುಹಾಕಲು ನಮೂನೆ-8 ಹೀಗೆ ಹೊಸದಾಗಿ 05 ನಮೂನೆಗಳನ್ನು ಪರಿಚಯಿಸಲಾಗಿರುತ್ತದೆ.

ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಿದ ನಂತರ, ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರು ಮತ್ತು ಜಿಲ್ಲಾ ಚುನಾವಣಾಧಿಕಾರಿಗಳು (D.E.O.)

ಹಾಗೂ 05 ನಗರಪಾಲಿಕೆಗಳ ಆಯುಕ್ತರು ಮತ್ತು ಅಪರ ಜಿಲ್ಲಾ ಚುನಾವಣಾಧಿಕಾರಿಗಳು (A.D.E.O.) ರವರೊಂದಿಗೆ ಸಭೆಯನ್ನು ನಡೆಸಲಾಗಿದ್ದು, ವಿಧಾನಸಭಾ ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಹೆಸರು ಸೇರ್ಪಡೆಗೆ ನಮೂನೆ-6, ಆಕ್ಷೇಪಣೆ ಮತ್ತು ಹೆಸರು ತೆಗೆದು ಹಾಕಲು ನಮೂನೆ-7 ಮತ್ತು ತಿದ್ದುಪಡಿಗೆ ನಮೂನೆ- 8 ಗಳು ಈಗಾಗಲೇ ಚಾಲ್ತಿಯಲ್ಲಿದ್ದು, ಹೊಸದಾಗಿ ಜಾರಿಗೆ ಬಂದಿರುವ "ಗ್ರೇಟರ್ ಬೆಂಗಳೂರು ಆಡಳಿತ (ಮತದಾರರ ನೋಂದಣಿ) ನಿಯಮಗಳು, 2025" ರಲ್ಲಿ ನಮೂನೆ-4, ನಮೂನೆ-5, ನಮೂನೆ-6, ನಮೂನೆ-7 ಮತ್ತು ನಮೂನೆ-8 ಗಳನ್ನು ಪುನ: ಪರಿಚಯಿಸಿದಲ್ಲಿ ಮತದಾರರಲ್ಲಿ ಗೊಂದಲವುಂಟಾಗುವುದರಿಂದ, "ಗ್ರೇಟರ್ ಬೆಂಗಳೂರು ಆಡಳಿತ (ಮತದಾರರ ನೋಂದಣಿ) ನಿಯಮಗಳು, 2025ರ ನಿಯಮ 30" ರನ್ವಯ ತತ್ಕಾಲದಲ್ಲಿ ಜಾರಿಯಲ್ಲಿರುವ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯನ್ನು ಅಳವಡಿಸಿಕೊಂಡು ಗ್ರೇಟರ್ ಬೆಂಗಳೂರು ಪ್ರಾಧಿಕಾರದ 05 ನಗರ ಪಾಲಿಕೆಗಳಿಗೆ ವಾರ್ಡುವಾರು ಮತದಾರರ ಪಟ್ಟಿಯನ್ನು ತಯಾರಿಸುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತ ಪಡಿಸಿರುತ್ತಾರೆ.

ಗ್ರೇಟರ್ ಬೆಂಗಳೂರು ಆಡಳಿತ (ಮತದಾರರ ನೋಂದಣಿ) ನಿಯಮಗಳು, 2025ರ **ನಿಯಮ 30** ರಲ್ಲಿ ವಿಧಾನಸಭಾ ಮತದಾರರ ಪಟ್ಟಿಯನ್ನು ಅಳವಡಿಸಿಕೊಳ್ಳಲು ವಿಶೇಷ ಉಪಬಂಧ ಕಲ್ಪಿಸಲಾಗಿರುತ್ತದೆ:

> **ನಿಯಮ 30:** "(1) ಈ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ರಾಜ್ಯ ಚುನಾವಣಾ ಆಯೋಗವು, ಅದು ಅಗತ್ಯವೆಂದು ಭಾವಿಸಿದರೆ, ಈ ಅಧಿನಿಯಮದಡಿಯಲ್ಲಿ ಚುನಾವಣೆಗಳ ಉದ್ದೇಶಕ್ಕಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಜನತಾ ಪ್ರಾತಿನಿಧ್ಯ ಅಧಿನಿಯಮ, 1950ರ (1950ರ ಕೇಂದ್ರ ಅಧಿನಿಯಮ, 43) ಅಡಿಯಲ್ಲಿ ಸಿದ್ಧಪಡಿಸಲಾದ ವಿಧಾನಸಭಾ ಕ್ಷೇತ್ರಗಳ ಮತದಾರರ ಪಟ್ಟಿಗಳನ್ನು ಅಳವಡಿಸಿಕೊಳ್ಳುವ ಮೂಲಕ ಗಣತಿ ನಡೆಸದೆ (without conducting an enumeration) ನಗರಪಾಲಿಕೆಗಳ ಮತದಾರರ ಪಟ್ಟಿಯನ್ನು ಸಿದ್ಧಪಡಿಸಬಹುದು"
>
> (2) ಉಪ-ನಿಯಮ (1)ರ ಅಡಿಯಲ್ಲಿ ಅಂಗೀಕರಿಸಲಾದಂತೆ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯನ್ನು ನಗರಪಾಲಿಕೆಯ ಪ್ರತಿಯೊಂದು ವಾರ್ಡ್‌ಗೆ ಪ್ರತ್ಯೇಕ ಭಾಗಗಳಾಗಿ ವಿಂಗಡಿಸತಕ್ಕದ್ದು ಮತ್ತು ಅದಕ್ಕೆ ಸಂಬಂಧಪಟ್ಟ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಸೇರಿಸಲಾದ ಎಲ್ಲಾ ಮತದಾರರನ್ನು ಸಂಬಂಧಪಟ್ಟ ನಗರಪಾಲಿಕೆಯ ವಾರ್ಡ್‌ಗಳ ಮತದಾರರ ಪಟ್ಟಿಯಲ್ಲಿ ಸೇರಿಸತಕ್ಕದ್ದು; ಮತ್ತು
>
> (3) ಉಪ-ನಿಯಮ (1)ರ ಅಡಿಯಲ್ಲಿ ಮತದಾರರ ಪಟ್ಟಿಗಳನ್ನು ಸಿದ್ಧಪಡಿಸುವಾಗ, ರಾಜ್ಯ ಚುನಾವಣಾ ಆಯೋಗವು, ಈ ಅಧಿನಿಯಮದ ಮೇರೆಗೆ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಮೇರೆಗೆ ಮತದಾರರ ಪಟ್ಟಿಗಳನ್ನು ತಯಾರಿಸಲು ನಿಗಧಿಪಡಿಸಿದ ಕಾರ್ಯವಿಧಾನವನ್ನು ಉಚಿತ ವ್ಯತ್ಯಾಸಗಳೊಂದಿಗೆ ಅನುಸರಿಸತಕ್ಕದ್ದು"

ರಾಜಕೀಯ ಪಕ್ಷದ ಪ್ರತಿನಿಧಿಗಳು ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರಿಗಳು ನೀಡಿದ ಅಭಿಪ್ರಾಯವನ್ನು ಪರಿಗಣಿಸಿ, "ಗ್ರೇಟರ್ ಬೆಂಗಳೂರು ಆಡಳಿತ (ಮತದಾರರ ನೋಂದಣಿ) ನಿಯಮ 2025 ರ ನಿಯಮ 30" ಅನ್ನು ಯಥಾವತ್ತಾಗಿ ಅಳವಡಿಸಿಕೊಂಡಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ 05 ನಗರಪಾಲಿಕೆಗಳಿಗೆ ದಿನಾಂಕ: 19-1-2026ರ ಕರಡು ಮತದಾರರ ಪಟ್ಟಿ ಪ್ರಕಟಣೆಯ ನಂತರ ಅಂತಿಮ ವಾರ್ಡುವಾರು ಮತದಾರರ ಪಟ್ಟಿಯನ್ನು ಹೊರಡಿಸಲು ಈ ಕೆಳಕಂಡಂತೆ ಪರಿಷ್ಕೃತ ವೇಳಾಪಟ್ಟಿಯನ್ನು ನಿಗದಿಪಡಿಸಿದೆ.

| ಕ್ರ. ಸಂ. | ಚಟುವಟಿಕೆ | ದಿನಾಂಕ |
|---|---|---|
| 1. | ವಾರ್ಡ್‌ಗಳ ವಿಂಗಡಣೆ ಅಧಿಸೂಚನೆಯಂತೆ ವಾರ್ಡಿನ ಗಡಿ ರೇಖೆಗೆ ಒಳಪಡುವ ಮತದಾರರನ್ನು ಗುರುತಿಸಿ ಸದರಿ ಮತದಾರರು ದಿನಾಂಕ: 19-01-2026 ರಂದು ಪ್ರಕಟಗೊಂಡ ಕರಡು ಮತದಾರರ ಪಟ್ಟಿಯಲ್ಲಿ ಇರುವ ಬಗ್ಗೆ ERO, AERO ಮತ್ತು BLO ರವರು ಖಚಿತಪಡಿಸಿಕೊಳ್ಳುವುದು. | **22-01-2026 ರಿಂದ 31-01-2026** |
| 2. | ಒಂದು ವಾರ್ಡ್‌ನ ವ್ಯಾಪ್ತಿಯಲ್ಲಿ ಬರುವ ವಿಧಾನಸಭಾ ಮತದಾರರ ಹೆಸರುಗಳು ಒಂದಕ್ಕಿಂತ ಹೆಚ್ಚು ವಾರ್ಡಿನ ಮತದಾರರ ಪಟ್ಟಿಯಲ್ಲಿ ಪುರಾವರ್ತನೆಯಾಗದಂತೆ ಎಚ್ಚರ ವಹಿಸುವುದು ಹಾಗೂ ಸಂಬಂಧಿಸಿದ ವಾರ್ಡಿನ ಮತದಾರರ ಪಟ್ಟಿಯನ್ನು ಆಯಾ ವಾರ್ಡಿನ ವ್ಯಾಪ್ತಿಗೆ ಬರುವ ವಿಧಾನಸಭಾ ಮತದಾರರ ಪಟ್ಟಿಯೊಂದಿಗೆ ತಾಳೆ ಮಾಡುವುದು. (ERO, AERO ಮತ್ತು BLO ರವರು) | **01-02-2026 ರಿಂದ 09-02-2026** |
| 3. | ವಿಧಾನಸಭಾ ಮತದಾರರ ಪಟ್ಟಿಗೆ 01-10-2025ರ ನಂತರ ಬರುವ ಪೂರಕ ಪಟ್ಟಿಗಳಂತೆ ಮತದಾರರನ್ನು ವಾರ್ಡ್‌ವಾರು ಕರಡು ಮತದಾರರ ಪಟ್ಟಿಗೆ ಪೂರಕ ಪಟ್ಟಿ-1 ಸಿದ್ಧಪಡಿಸಲು Online ಮ್ಯಾಟ್ರಿಕ್ಸ್ ಸಾಫ್ಟ್‌ವೇರ್‌ನಲ್ಲಿ (From to Matrix) ಅಳವಡಿಸಲು. | **10-02-2026 ರಿಂದ 17-02-2026** |
| 4. | ಮುದ್ರಕರು From to Matrix ನಂತೆ E-Roll ಜನರೇಟ್ ಮಾಡುವುದು. | **18-02-2026 ರಿಂದ 22-02-2026** |
| 5. | ವಾರ್ಡ್‌ವಾರು ಮತದಾರ ಪಟ್ಟಿಯ ಅಂತಿಮ ಚೆಕ್‌ಲಿಸ್ಟ್‌ನ್ನು ಮುದ್ರಕರಿಂದ ಪಡೆದುಕೊಳ್ಳುವುದು. | **23-02-2026 ರಿಂದ 27-02-2026** |
| 6. | ಪಡೆದ ಅಂತಿಮ ಚೆಕ್‌ಲಿಸ್ಟ್‌ನ್ನು ವಾರ್ಡ್‌ವಾರು ಪರಿಶೀಲಿಸುವುದು. | **28-02-2026 ರಿಂದ 04-03-2026** |
| 7. | ಪರಿಶೀಲಿಸಿದ ನಂತರ ಬದಲಾವಣೆ ಇದ್ದಲ್ಲಿ ಮ್ಯಾಟ್ರಿಕ್ಸ್ ಸಾಫ್ಟ್‌ವೇರ್‌ನಲ್ಲಿ (From to Matrix) ಅಳವಡಿಸುವುದು. | **05-03-2026 ರಿಂದ 09-03-2026** |
| 8. | ಮುದ್ರಕರು ಅಂತಿಮ ಮತದಾರರ ಪಟ್ಟಿಯ E-Roll ಜನರೇಟ್ ಮಾಡುವುದು. | **12-03-2026 ರಿಂದ 16-03-2026** |
| 9. | ವಾರ್ಡ್‌ವಾರು ಅಂತಿಮ ಮತದಾರ ಪಟ್ಟಿಯನ್ನು ಮುದ್ರಕರಿಂದ ಪಡೆದುಕೊಳ್ಳುವುದು. | **17-03-2026 ರಿಂದ 29-03-2026** |
| 10. | ಅಂತಿಮ ಮತದಾರರ ಪಟ್ಟಿ ಪ್ರಕಟಣೆ | **30-03-2026** |

1. **ಮತದಾರರ ಪಟ್ಟಿ ದೃಢೀಕರಿಸುವ ಬಗ್ಗೆ:** ಮತದಾರರ ನೋಂದಣಿ ಅಧಿಕಾರಿಗಳು ಶೇ.100 ರಷ್ಟು ಪರಿಶೀಲಿಸಿ ಸುತ್ತೋಲೆಯಲ್ಲಿ ಲಗತ್ತು ಇರುವ ನಮೂನೆ-2 ರಲ್ಲಿ ದೃಢೀಕರಣ ಪತ್ರವನ್ನು ಆಯೋಗಕ್ಕೆ ಸಲ್ಲಿಸುವುದು. ಅಪರ

ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಆಯಾ ನಗರಪಾಲಿಕೆಗಳ ಆಯುಕ್ತರು ಮೇಲ್ಕಂಡ ಆಯೋಗದ ಸೂಚನೆಯಂತೆ ತಯಾರಿಸಲಾದ ವಾರ್ಡ್‌ವಾರು ಮತದಾರರ ಪಟ್ಟಿಯನ್ನು ಶೇ. 10 ರಷ್ಟು ಪರಿಶೀಲಿಸುವುದು ಅಲ್ಲದೇ ನಮೂನೆ 3 ರಲ್ಲಿ ದೃಢೀಕರಣ ಪತ್ರವನ್ನು ಆಯೋಗಕ್ಕೆ ಸಲ್ಲಿಸುವುದು.

2. **ಮತದಾರರ ಪಟ್ಟಿಯ ಭಾಷೆ ಮತ್ತು ಮುದ್ರಿಸಬೇಕಾದ ಪ್ರತಿಗಳು:** ಮತದಾರರ ಪಟ್ಟಿಗಳನ್ನು ಕನ್ನಡ ಮತ್ತು ಆಂಗ್ಲಭಾಷೆಯಲ್ಲಿ ಮುದ್ರಿಸುವುದು.

**ಅಂತಿಮ ಮತದಾರರ ಪಟ್ಟಿ:** 30 ಸೆಟ್‌ಗಳನ್ನು (ಕನ್ನಡ 1 5 ಸೆಟ್‌ಗಳು ಮತ್ತು ಆಂಗ್ಲಭಾಷೆ 1 5 ಸೆಟ್‌ಗಳು) ಮುದ್ರಿಸತಕ್ಕದ್ದು.

3. **ಅಂತಿಮ ಮತದಾರರ ಪಟ್ಟಿ ಪ್ರಕಟಣೆ:** "ಗ್ರೇಟರ್ ಬೆಂಗಳೂರು ಆಡಳಿತ (ಮತದಾರರ ನೋಂದಣಿ) ನಿಯಮಗಳು, 2025ರ ನಿಯಮ 21 ರನ್ವಯ ನಮೂನೆ-16" ರಲ್ಲಿ **ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಿ ನಿಗದಿತ ಸ್ಥಳಗಳಲ್ಲಿ ಪ್ರಚುರ ಪಡಿಸುವುದು.** ಎಲ್ಲಾ ವಾರ್ಡುಗಳ ಅಂತಿಮ ಮತದಾರರ ಪಟ್ಟಿಯ ಕನ್ನಡ ಭಾಷೆಯ ಒಂದು ಪ್ರತಿ ಮತ್ತು ಆಂಗ್ಲಭಾಷೆಯ ಒಂದು ಪ್ರತಿಯನ್ನು ಮಾನ್ಯತೆ ಪಡೆದ ಎಲ್ಲಾ ರಾಜಕೀಯ ಪಕ್ಷಗಳಿಗೆ ನೀಡುವುದು. ಅಧಿಕೃತ ವೆಬ್‌ಸೈಟಿನಲ್ಲಿ ಭಾವಚಿತ್ರ ರಹಿತ ಮತದಾರರ ಪಟ್ಟಿಯನ್ನು ಅಪ್‌ಲೋಡ್ ಮಾಡುವುದು. **ಅಂತಿಮ ಮತದಾರರ ಪಟ್ಟಿ ಪ್ರಕಟಿಸಿರುವ ಬಗ್ಗೆ ಅಂದೇ ರಾಜ್ಯ ಚುನಾವಣಾ ಆಯೋಗಕ್ಕೆ ವರದಿ ನೀಡುವುದು.**
4. **ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ:** "ಗ್ರೇಟರ್ ಬೆಂಗಳೂರು ಆಡಳಿತ (ಮತದಾರರ ನೋಂದಣಿ) ನಿಯಮದ ಪ್ರಕರಣ 30" ರನ್ವಯ ಚಾಲ್ತಿಯಲ್ಲಿರುವ ವಿಧಾನಸಭಾ ಮತದಾರರ ಪಟ್ಟಿಯನ್ನು ಅಳವಡಿಸಿಕೊಂಡು ವಾರ್ಡ್‌ವಾರು ಮತದಾರರ ಪಟ್ಟಿಯನ್ನು ಸಿದ್ಧಪಡಿಸಿರುವುದರಿಂದ, ಸದರಿ ಮತದಾರರ ಪಟ್ಟಿಗೆ ನೇರವಾಗಿ ಹೆಸರು ಸೇರ್ಪಡೆ ಮಾಡಲು ಅವಕಾಶವಿರುವುದಿಲ್ಲ. ಆದುದರಿಂದ, ವಿಧಾನಸಭಾ ಮತದಾರರ ನೋಂದಣಾಧಿಕಾರಿಗಳು ನಿಯಮಾನುಸಾರ ಅಂಗೀಕರಿಸಿರುವ ಸೇರ್ಪಡೆಗಳು, ಬಿಡತಕ್ಕವುಗಳು ಮತ್ತು ತಿದ್ದುಪಡಿಗಳನ್ನು ನಾಮಪತ್ರ ಸಲ್ಲಿಸುವ ಕೊನೆಯ ದಿನಾಂಕದವರೆವಿಗೂ ಗ್ರೇಟರ್ ಬೆಂಗಳೂರು ನಗರಪಾಲಿಕೆಗಳ ವಾರ್ಡ್‌ವಾರು ಮತದಾರರ ಪಟ್ಟಿಗೆ ಅಳವಡಿಸಿಕೊಳ್ಳುವುದು.
5. **ಮತದಾರರ ಪಟ್ಟಿಯ ಗಣಕೀಕರಣ ಮತ್ತು ಮುದ್ರಣದ ಬಗ್ಗೆ:** ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿಯ ಡಾಟಾಬೇಸ್ ಸುರಕ್ಷತೆಯ ದೃಷ್ಟಿಯಿಂದ ರಾಜ್ಯ ಚುನಾವಣಾ ಆಯೋಗದಲ್ಲಿ ಡಾಟಾ ಸೆಂಟರ್ ಅನ್ನು ಸ್ಥಾಪಿಸಲಾಗಿರುತ್ತದೆ. ಮತದಾರರ ಪಟ್ಟಿಯನ್ನು ಮುದ್ರಿಸಲು ರಾಜ್ಯ ಚುನಾವಣಾ ಆಯೋಗದಿಂದ ಇ-ಟೆಂಡರ್ ಮೂಲಕ M/s. ATISHAY LIMITED, CONSORTIUM PARTNER, M/s. GUNDAL BUSINESS PVT. LTD., DAVANAGERE ಈ ವೆಂಡರ್ ಅನ್ನು ಗುರುತಿಸಿ ಉಲ್ಲೇಖ (3) ರಂತೆ ಆದೇಶವನ್ನು ಹೊರಡಿಸಲಾಗಿರುತ್ತದೆ. ಅದರಂತೆ, ಮುದ್ರಣ ಸಂಸ್ಥೆಯವರಿಗೆ ಕಾರ್ಯಾದೇಶವನ್ನು ರಾಜ್ಯ ಚುನಾವಣಾ ಆಯೋಗದಿಂದ ನೀಡಲಾಗಿದೆ. ಮತದಾರರ ಪಟ್ಟಿಯ ಗಣಕೀಕರಣ ಹಾಗೂ ಮುದ್ರಣದ ಬಗ್ಗೆ ಮೇಲ್ಕಂಡಂತೆ ನಿಗದಿಪಡಿಸಲಾದ ವೇಳಾಪಟ್ಟಿಯಂತೆ ಮುದ್ರಕರೊಂದಿಗೆ ಸಮನ್ವಯವನ್ನು ಮಾಡಿಕೊಂಡು ವಾರ್ಡ್‌ವಾರು ಮತದಾರರ ಪಟ್ಟಿಯನ್ನು ಮುದ್ರಿಸಿಕೊಳ್ಳುವುದು.
6. ಆಯೋಗವು ಮುದ್ರಕರೊಂದಿಗೆ ಮಾಡಿಕೊಂಡಿರುವ S O P ಯಂತೆ ವೆಂಡರ್‌ರವರು ನಿಯೋಜಿಸುವ Liaison Official ರವರಿಗೆ E.R.O. ಮತ್ತು A.E.R.O. ರವರು ಅಗತ್ಯ ಮಾಹಿತಿಯನ್ನು ಒದಗಿಸುವುದು. ಮತದಾರರ ಪಟ್ಟಿಯ ತಯಾರಿಕೆಯ ಸಮಯದಲ್ಲಿ ಮತದಾರರ ನೋಂದಣಿ ಅಧಿಕಾರಿಗಳು ಆಯಾ ವಾರ್ಡ್‌ಗೆ ಸಂಬಂಧಪಟ್ಟಂತೆ ವಿಧಾನಸಭಾ ಮತದಾರರ ಪಟ್ಟಿಯನ್ನು ಅಳವಡಿಸಿಕೊಂಡು From to Matrix ಅನ್ನು ಸಿದ್ಧಪಡಿಸಿ ಮುದ್ರಕರಿಗೆ ಒದಗಿಸಿ ಚೆಕ್‌ಲಿಸ್ಟ್ ಜನರೇಟ್ ಮಾಡಲು ಕ್ರಮ ಕೈಗೊಳ್ಳುವುದು. ಸದರಿ ಚೆಕ್ ಲಿಸ್ಟ್ ಅನ್ನು ಪರಿಶೀಲನಾಧಿಕಾರಿಗಳು ಪರಿಶೀಲಿಸಿ, ದೃಢೀಕರಿಸಿ, ವೆಂಡರ್ ಮೂಲಕ ನಿಗದಿತ ಕಾಲಾವಧಿಯೊಳಗೆ ನಿಗದಿಪಡಿಸಿರುವಷ್ಟು ಪ್ರತಿಗಳನ್ನು (ಸೆಟ್) ಮುದ್ರಿಸಿಕೊಳ್ಳುವುದು. ಸ್ಟಾಕ್ ರಿಜಿಸ್ಟರ್‌ನಲ್ಲಿ

ಮುದ್ರಿತ ಸೆಟ್‌ಗಳ ಮಾಹಿತಿ ಹಾಗೂ ವಿತರಿಸಿರುವ ಬಗ್ಗೆಯೂ ಸಹ ಮಾಹಿತಿಯನ್ನು ನಿರ್ವಹಿಸುವುದು.

7. ಮೇಲ್ಕಂಡ ಸೂಚನೆಗಳಂತೆ, ಮತದಾರರ ಪಟ್ಟಿಯಲ್ಲಿ ಯಾವುದೇ ಲೋಪ-ದೋಷಗಳಿಗೆ ಅವಕಾಶ ನೀಡದಂತೆ ವಾರ್ಡ್‌ವಾರು ಅಂತಿಮ ಮತದಾರರ ಪಟ್ಟಿಯನ್ನು ತಯಾರಿಸಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡು, ನಿಗದಿತ ಸಮಯದೊಳಗೆ ಪೂರ್ಣಗೊಳಿಸುವುದು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವಾರ್ಡುವಾರು ಮತದಾರರ ಪಟ್ಟಿಯನ್ನು ನಿಗದಿತ ಅವಧಿಯೊಳಗೆ, ಯಾವುದೇ ಲೋಪದೋಷಗಳಿಗೆ ಅವಕಾಶ ನೀಡದಂತೆ ಸಂಬಂಧಿಸಿದ ಆಯಾ ನಗರಪಾಲಿಕೆಯ ಆಯುಕ್ತರು ಹಾಗೂ ಅಪರ ಜಿಲ್ಲಾ ಚುನಾವಣಾಧಿಕಾರಿಗಳು ಅತ್ಯಂತ ಜಾಗರೂಕತೆಯಿಂದ ಎಚ್ಚರಿಕೆ ವಹಿಸಿ ಕಾರ್ಯನಿರ್ವಹಿಸುವುದು. ಗ್ರೇಟರ್ ಬೆಂಗಳೂರು ಪ್ರಾಧಿಕಾರದ 05 ನಗರ ಪಾಲಿಕೆಗಳ ವಾರ್ಡುವಾರು ಮತದಾರರ ಪಟ್ಟಿಯಲ್ಲಿ ಯಾವುದೇ ಲೋಪದೋಷಗಳು ಕಂಡು ಬಂದಲ್ಲಿ ಸಂಬಂಧಿಸಿದ ಜಿಲ್ಲಾ ಚುನಾವಣಾಧಿಕಾರಿಗಳು / ಅಪರ ಜಿಲ್ಲಾ ಚುನಾವಣಾಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.

Digitally signed by
NARAPPA REVANASIDDAPPA NAGARAJU
Date: 22-01-2026 16:08:08

ಕಾರ್ಯದರ್ಶಿ (ಪ್ರ),
ರಾಜ್ಯ ಚುನಾವಣಾ ಆಯೋಗ, ಕರ್ನಾಟಕ.

**ಇವರಿಗೆ,**

1. ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು,
2. ವಿಶೇಷ ಆಯುಕ್ತರು (ಚುನಾವಣೆ), ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು,
3. ವಿಶೇಷ ಕರ್ತವ್ಯ ಅಧಿಕಾರಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು,
4. ಆಯುಕ್ತರು ಮತ್ತು ಅಪರ ಜಿಲ್ಲಾ ಚುನಾವಣಾಧಿಕಾರಿಗಳು, ಬೆಂಗಳೂರು ಕೇಂದ್ರ, ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮ ನಗರಪಾಲಿಕೆ,
5. ಸಹಾಯಕ ಆಯುಕ್ತರು (ಚುನಾವಣೆ), ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು.
6. Prime Bidder Atishay Limited ಮತ್ತು Consortium Partner M/s. Gundal Business Pvt. Ltd, ನಂ.1890/23, ಶ್ರೀ ಗಂಗಾ ಎಲ್.ಐ.ಸಿ. ಕಾಲೋನಿ, ನೂತನ್ ಕಾಲೇಜು ಹಿಂಭಾಗ, ವಿದ್ಯಾನಗರ, ದಾವಣಗೆರೆ-577005. (ಶ್ರೀ ಮಂಜುನಾಥ ಗೌಡ -9220007333)

**<u>ನಮೂನೆ – 2</u>**

**<u>ದೃಢೀಕರಣ ಪತ್ರ</u>**

(ಸಂಬಂಧಿಸಿದ ಮತದಾರರ ನೋಂದಣಿ ಅಧಿಕಾರಿ ಮತ್ತು ಸಹಾಯಕ ಮತದಾರರ ನೋಂದಣಿ ಅಧಿಕಾರಿ ದೃಢೀಕರಿಸಿ ಆಯುಕ್ತರು ಮತ್ತು ಅಪರ ಜಿಲ್ಲಾ ಚುನಾವಣಾಧಿಕಾರಿಗಳು, . . . . . . . . . . . . . . . . . . . . ನಗರ ಪಾಲಿಕೆ, ಇವರ ಮೇಲು ಸಹಿಯೊಂದಿಗೆ ಆಯೋಗಕ್ಕೆ ಕಳುಹಿಸುವುದು)

.............................................................. ನಗರ ಪಾಲಿಕೆಗೆ ಒಳಪಡುವ ...................................... ವಾರ್ಡುಗಳ (ವಾರ್ಡಿನ ಸಂಖ್ಯೆ ಮತ್ತು ಹೆಸರು) ಮತದಾರರ ಪಟ್ಟಿಗಳನ್ನು ಆಯೋಗದ ಸೂಚನೆಗಳಂತೆ, ಸರ್ಕಾರವು ಹೊರಡಿಸಿರುವ ವಾರ್ಡುಗಳ ಕ್ಷೇತ್ರಗಳ ಪುನರ್ ವಿಂಗಡಣೆಯ ಅಧಿಸೂಚನೆಗೆ ಅನುಗುಣವಾಗಿ ಮತ್ತು ಗ್ರೇಟರ್ ಬೆಂಗಳೂರು ಆಡಳಿತ (ಮತದಾರರ ನೋಂದಣಿ) ನಿಯಮಗಳು, 2025 ರಂತೆ ತಯಾರಿಸಲಾಗಿದೆ ಹಾಗೂ ಯಾವುದೇ ನ್ಯೂನತೆಗಳು ಇರುವುದಿಲ್ಲ ಎಂದು ದೃಢೀಕರಿಸುತ್ತೇನೆ.

| | |
|---|---|
| ಮತದಾರರ ನೋಂದಣಿ ಅಧಿಕಾರಿ | ಸಹಾಯಕ ಮತದಾರರ ನೋಂದಣಿ ಅಧಿಕಾರಿ |
| ವಾರ್ಡ್ ಸಂಖ್ಯೆ: .................. | ವಾರ್ಡ್ ಸಂಖ್ಯೆ: .................. |
| .................. ನಗರ ಪಾಲಿಕೆ. | .................. ನಗರ ಪಾಲಿಕೆ. |

-ಮೇಲು ಸಹಿ-

ಆಯುಕ್ತರು ಮತ್ತು ಅಪರ ಜಿಲ್ಲಾ ಚುನಾವಣಾಧಿಕಾರಿಗಳು,

.................. ನಗರ ಪಾಲಿಕೆ.

**ನಮೂನೆ – 3**

| ನಗರ ಪಾಲಿಕೆಯ ವಾರ್ಡಿನ ಸಂಖ್ಯೆಮತ್ತು ಹೆಸರು | ವಾರ್ಡುವಾರು ಮತದಾರರ ಪಟ್ಟಿಯ ಭಾಗದ ಸಂಖ್ಯೆ | ಮತಗಟ ್ಟೆ ವಿವರ | ಮತದಾರರ ನೋಂದಣಿ ಅಧಿಕಾರಿ ಸಹಿ, ಹೆಸರು ಮತ್ತು ಪದನಾಮ | ಸಹಾಯಕ ಮತದಾರರ ನೋಂದಣಿ ಅಧಿಕಾರಿ ಸಹಿ, ಹೆಸರು ಮತ್ತು ಪದನಾಮ | ಮೇಲ್ವಿಚಾರಣೆ ನಡೆಸಿದ ಅಧಿಕಾರಿಯ ಸಹಿ, ಹೆಸರು ಮತ್ತು ಪದನಾಮ |
|---|---|---|---|---|---|
| 1 | 2 | 3 | 4 | 5 | 6 |
| | | | | | |

ಆಯುಕ್ತರು ಮತ್ತು ಅಪರ ಜಿಲ್ಲಾ ಚುನಾವಣಾಧಿಕಾರಿಗಳು,
……………… ನಗರ ಪಾಲಿಕೆ.

-ಮೇಲು ಸಹಿ-

ಮುಖ್ಯ ಆಯುಕ್ತರು,
ಗ್ರೇಟರ್ ಬೆಂಗಳೂರು ಪ್ರಾಧಿಕಾರ.